ಮಾಡಿದ್ದೇನೆಂದರೆ ಲ್ಯಾಪ್‌ಟಾಪನ್ನು ತೆರೆದು, ರಾತ್ರಿ ಕೀಲಿಸಿದ್ದನ್ನು ಮರಳಿ ಕಣ್ಣೊಳಕ್ಕೆ ತಂದುಕೊಂಡಿದ್ದು... ರಾತ್ರಿಯಲ್ಲಿ ಹೊಳೆದಿದ್ದೇನು ಕತೆಯೋ ಹಕೀಕತೋ ಎಂದು ತನಿಖಿಸಿದ್ದು. ಒಡನೊಡನೆಯೇ ಸತ್ಯಾಸತ್ಯಗಳ ಫರಕು ಪರಿಕಿಸಿದ್ದು...

★ ★ ★

'ನೀನಿಲ್ಲೇ ಇದ್ದೀಯಾ, ಬಡಾನೀಲ್...' ರೇಣು ಸಿಂಡರುಮೋರೆಯ ನಡುವೆ ತನ್ನೆಂದಿನ ಕಡು 'ಮರಾಠಿ' ಮಾತನ್ನೂ ಸಿಂಡರಿಸಿ, ಸಿಡುಕಿ ಕೇಳಿದಳು. ಅವಳ ಕಣ್ಣುಗಳಲ್ಲಿ ಮರಳಿ ನಿದ್ದೆಗಿಳಿಯುವ ತವಕವಿತ್ತು. ಅಷ್ಟೇ ನಿದ್ದೆಗೆಟ್ಟ ರೇಜಿಗೆಯೂ ಇದ್ದಿತು. 'ಅಷ್ಟು ಫೋನು ರಿಂಗಾಯಿತು... ಯಾರೋ ಏನೋ! ಬಂದೆತ್ತಿಕೋ ಬಾರದಿತ್ತಾ?' ಎಂದು ಮರಾಠಿಯಲ್ಲಿಯೇ ತರಾಟೆಯಾಯಿತು. 'ಬೆಳಬೆಳಗ್ಗೆ ನಿದ್ದೆಗೆಡಿಸಿದ ಆ ಹರಾಮ ನೆಗೆದುಬಿದ್ದು ಹೋಗಲಿ...' ಅಂತಂದು ಶಪಿಸಿ, ಅವಳಿನ್ನೇನು, ರೂಮು ಹೊಕ್ಕು ಹಾಸಿಗೆಯಲ್ಲಿ ಮೈಚೆಲ್ಲಿದಷ್ಟೇ, ಫೋನು ಮತ್ತೆ ರಿಂಗಣಿಸಿತು. ಹೌದು! ಮತ್ತೆ ಅದೇ ಪ್ಯಾನಾಸಾನಿಕ್ಕು... ಅದೇ ಇಪ್ಪತ್ತನೇ ಶತಮಾನದ ಮುಪ್ಪು ಮುಪ್ಪು ಗೂಗೆಕೂಗು!!

ಮರುಕ್ಷಣಕ್ಕೆಲ್ಲ ರುದ್ರನೀಲ ಥಾಪಸೆಯ ಕೈಯಲ್ಲಿ ಮತ್ತು ಕಿವಿಬದಿಯಲ್ಲಿ ಪ್ಯಾನಸಾನಿಕ್ಕಿನ ಹ್ಯಾಂಡ್‌ಸೆಟ್ಟಿದ್ದಿತು. 'ಹಲೋ... ಹಲೋ... ಕೋನ್?' ಅಂತನ್ನುತ್ತ ಮಾತಿಗಿಳಿದ. ಅತ್ತಲ ಕಡೆಯಿಂದ ಮತ್ತದೇ 'ಡೇವಿಡ್'ನ ಪ್ರಸ್ತಾಪವಾಯಿತು. 'ನೋಡೀಪ್ಪ... ನಮಗೆ ಯಾರೂ ಡೇವಿಡ್‌ಗೀವಿಡ್ ಗೊತ್ತಿಲ್ಲ... ಸುಮ್ಮನೆ ಇಷ್ಟು ಮುಂಚೆ ಯಾಕೆ ಫೋನು ಮಾಡುತೀರಿ?' ಎಂದು ಎಂದಿನದೇ ನಮ್ರತೆಯ ನಡುವೆ ಕೇಳಿದ. ಅಸಲಿನಲ್ಲಿ, ಅವನ ಕೋಪವೆಂಬ ಕೋಪವೂ ಸದಾ ಶಾಂತವಿರುತ್ತದೆ. ದೂರುತಗಾದೆ ಕೂಡ ವಿನಂತಿಯಂತಿರುತ್ತವೆ!!

'ಸಾರ್... ನೀಲ್ ಸಾರ್ ಅಲ್ಲವಾ ಸಾರ್ ನೀವು? ನಾನು ಸಾರ್, ಡೇವಿಡ್ ಸಾರ್ ಅವರ ಮನೇಲಿಲ್ಲವರಾ, ಶರಣಪ್ಪ.... ಶರಣಪ್ಪ ಅಂತ...'

'....!!'

'ಅದೇ ಸಾರ್, ನೆಲಮಂಗಲದ ಹತ್ರ ಡೇವಿಡ್ ಸಾರ್ ಅವರ ಫಾರ್ಮಿಂದ...'

ರುದ್ರನೀಲ ಥಾಪಸೆಗೆ, ಈಗ ಅಲ್ಪಸ್ವಲ್ಪ ವಿಷಯ ಅರ್ಥವಾಯಿತು. ನೆಲಮಂಗಲದ ಬಳಿಯ ಫಾರ್ಮು ಅಂತ ಕೇಳಿಬಂದಾಗ, ಫೋನು ಮಾಡಿದಾತ ವರ್ಷಗಳ ಹಿಂದೆ ತಾನು ಕೈಕೊಂಡ ಪ್ರಾಜೆಕ್ಟೊಂದರ ಒಡೆಯ 'ಡೇವಿಡ್ ಹ್ಯೂಸ್'ನ ಕುರಿತಾಡುತ್ತಿರಬಹುದೇನೋ ಅಂತ ಸಣ್ಣದಾಗಿ ಹೊಳೆಯಿತು. ಆರ್ಥರ್ ಡೇವಿಡ್ ಹ್ಯೂಸ್... ಎಂದು ತಂತನಗೇ ಹೇಳಿಕೊಂಡು, ಈ ಹೆಸರಿನಾತನ ಕಟುವಾದ ಫಿರಂಗೀಮೋರೆಯನ್ನು ಕಣ್ಣಿಗೆ ತಂದುಕೊಂಡು, 'ಡೇವಿಡ್ ಸಾರ್ ಅಂದರೆ ಮಿಸ್ಟರ್ ಹ್ಯೂಸ್ ಅವರ ಬಗ್ಗೆಯಾ ನೀವು ಹೇಳುತ್ತಿರುವುದು?' ಎಂದು ಕೇಳಿದ. ಫೋನು ಮಾಡಿದಾತ, 'ಹೌದು ಸಾರ್...' ಅಂತಂದ.

'ನಿಮ್ಮ ಹೆಸರೇನಂದಿರಿ?'

'ಶರಣಪ್ಪ ಸಾರ್...'

'ಓಹ್... ಶರಣಪ್ಪ! ಅದೇ... ಅದೇ... ಡೇವಿಡ್ ಹ್ಯೂಸ್ ಅವರ ಮನೆಯಲ್ಲಿ ಅಡುಗೆ ಮಾಡಿಕೊಂಡಿದ್ದರಲ್ಲ, ಗುಲ್ಬರ್ಗಾ ಸೈಡಿನವರು...?'

'ಹಾಂ ಸಾರ್... ಹಾಂ...'

'ಸರಿ... ಈಗ ಹೇಳಿಪ್ಪ. ಏನು ಸಮಾಚಾರ? ಇಷ್ಟು ಬೆಳಿಗ್ಗೆ ಯಾಕೆ ಮಾಡಿದ್ದೀರಿ...'